ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ ೧೬ನೇ ಸೆಪ್ಟೆಂಬರ್ ೧೯೯೧. ಭಾದ್ರಪದ ೨೫, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೦೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : (ಶ್ರೀಮತಿ ನಾಗಮ್ಮ ಕೇಶವಮೂರ್ತಿ) ಅವರು ಪೀಠವನ್ನು

ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸಮುದ್ರದ ಕೊರೆತದಿಂದ ತೊಂದರೆ.

2977-ಶ್ರೀ ಜಿ.ಎಸ್. ಆಚಾರ್ (ಬೈಂದೂರ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ಕ್ಷೇತ್ರದ ಕೊಡೇರಿ, ಕೋಟೆಬಾಗಿಲು, ಕಳಿಹಿತ್ಲು, ಕರ್ಕಿವಳಿ, ಕನ್ನಡಕುದ್ರು ಮೊದಲಾದ ಕಡೆಗಳಲ್ಲಿ ಸಮುದ್ರ ಕೊರೆತದಿಂದ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಮುದ್ರ ಕೊರೆತ ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಇ) ಈ ಕುರಿತು ವಿಳಂಬಕ್ಕೆ ಕಾರಣಗಳೇನು?

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬಂದಿದೆ.

ಆ) ಸಮುದ್ರ ಕೊರೆತಕ್ಕೊಳಗಾದ ಈ ಭಾಗಗಳಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಈ ಕಾಮಗಾರಿಗಳು 1991-92ರ ಸಾಲಿನ ಆಯವ್ಯಯದಲ್ಲಿ ಸೇರಿವೆ.

ಇ) ಆಯವ್ಯಯದಲ್ಲಿ ಸಾಕಷ್ಟು ಅನುದಾನ ಇಲ್ಲದ ಕಾರಣ ಈ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಉಪಾಧ್ಯಕ್ಷರೆಯವರೇ, ಈ ಕೆಲಸದ ಅವಶ್ಯಕತೆ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಬಜೆಟ್‌ನಲ್ಲಿ ಹಣವನ್ನು ಒದಗಿಸಲಾಗಿಲ್ಲ, ಹಾಗೂ ಅನುದಾನ ಇಲ್ಲದಿರುವುದರಿಂದ ಈ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಆಗಲಿಲ್ಲ ಎನ್ನುವ ಅಭಿಪ್ರಾಯವನ್ನು ನಾನು ಸರ್ಕಾರದಿಂದ ಕೇಳಿದ್ದೇನೆ. ನನಗೆ ತಿಳಿದಿರುವಂತೆ ಕಳೆದ ವರ್ಷದ ಬಜೆಟ್‌ನಲ್ಲಿ ಬೈಂದೂರು ಕ್ಷೇತ್ರದ

10 ಸಮುದ್ರ ಕೊರತೆಯ ಕಾಮಗಾರಿಗಳಿಗೆ, 10 ಲಕ್ಷದ ಪ್ರಕಾರ ಅಂದಾಜು ಮಾಡಿ ಕಾರ್ಯಗತಮಾಡಲು ಅವಕಾಶ ಕೊಟ್ಟರು. ನಾನು ಮಾನ್ಯ ಸಚಿವರ ಹತ್ತಿರ ಹೋಗಿ ನಾಲ್ಕು ಕಾಮಗಾರಿಗಳನ್ನಾದರೂ ತೆಗೆದುಕೊಳ್ಳಿ ಎಂದು ಹೇಳಿದ್ದೆ. ಆ ನಾಲ್ಕು ಕಾಮಗಾರಿಗಳನ್ನು ತೆಗೆದುಕೊಳ್ಳಲ್ಲಿಲ್ಲ. ಅದರ ಬದಲು ಈ ವರ್ಷದ ಬಜೆಟ್‌ನಲ್ಲಿ ಒಂದು ಸಾವಿರವನ್ನು ಇಡಲಾಗಿದೆ. ಈ ರೀತಿ ಬಜೆಟ್‌ನಲ್ಲಿ ಹಣ ಇಟ್ಟು ಕಾಮಗಾರಿಯನ್ನು ಮಾಡದಿರುವುದು ಎಂದರೆ ಏನು ಅರ್ಥ? ಬಜೆಟ್‌ನಲ್ಲಿ ಇಲ್ಲದಿರುವಂತಹ ಸಮುದ್ರ ಕೊರೆತದ ಕಾಮಗಾರಿಗಳು ಅಲ್ಲಿ ಕಾರ್ಯಗತವಾಗುತ್ತಿದೆ. ನನ್ನ ಕ್ಷೇತ್ರದಲ್ಲಿ ದುರಾದೃಷ್ಟವಶಾತ್ ಯಾವುದೇ ಕಾಮಗಾರಿಗಳು ಕಾರ್ಯಗತವಾಗುತ್ತಿಲ್ಲ. ಮಾನ್ಯ ಸಚಿವರು ಬಂದು ನೋಡಿ ಹೋಗಿದ್ದಾರೆ. ಮಾನ್ಯ ದೇವೇಗೌಡರ ಕಾಲದಿಂದ, ಮಾನ್ಯ ಪುಟ್ಟಸ್ವಾಮಿಗೌಡರು, ಮಾನ್ಯ ವೀರಪ್ಪಮೋಯಿಲಿಯವರು, ಮಲ್ಲಿಕಾರ್ಜುನ ಪ್ರಸನ್ನರವರು ಬಂದು ಈ ನಾಲ್ಕು ಕಾಮಗಾರಿಗಳನ್ನು ನೋಡಿಹೋಗಿದ್ದರು. ಅವರುಗಳಿಗೆ ವಾಸ್ತವಿಕವಾದ ಸ್ಥಿತಿ ಅರ್ಥವಾಗಿದೆ. ಬಜೆಟ್‌ನ ಹೊರಗಿನ ಕಾಮಗಾರಿಗಳನ್ನು ಹೇಗೆ ಮಾಡಿಸುತ್ತೀರೋ ಅದೇ ರೀತಿ ತುರ್ತು ಅವಶ್ಯಕತೆಯನ್ನು ನೋಡಿ ಈ ಕಾಮಗಾರಿಗಳ ಕೆಲಸವನ್ನು ತೆಗೆದುಕೊಳ್ಳಲು ಸರ್ಕಾರ ಮನಸ್ಸು ಮಾಡುತ್ತಿದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಮಾನ್ಯ ಉಪಾಧ್ಯಕ್ಷರೇ, ನಾನು ಈಗಾಗಲೇ ಆ ಸ್ಥಳಕ್ಕೆ ಶ್ರೀ ಆಚಾರ್ ಜೊತೆ ಭೇಟಿ ಕೊಟ್ಟು ಬಂದಿದ್ದೇನೆ. ಅಲ್ಲಿನ ತೀವ್ರತೆಯ ಬಗ್ಗೆ ನನಗೆ ಗೊತ್ತಿದೆ. ಈ ಸಲ ಹೆಚ್ಚಿನ ಅನುದಾನ ಬಿಡುಗಡೆಗೆ ಪ್ರಯತ್ನ ಮಾಡುತ್ತಿದ್ದೇನೆ. ಅದಾದ ಕೂಡಲೆ ಖಂಡಿತವಾಗಿಯೂ ಸಹ ಈ ಕಾಮಗಾರಿಗಳನ್ನು ತೆಗೆದುಕೊಂಡು ಕೆಲಸವನ್ನು ಪೂರೈಸುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಸಚಿವರು ಈಗಾಗಲೇ ಕಂಡುಕೊಂಡ ಹಾಗೆ ಆ ಕಾಮಗಾರಿಗಳಲ್ಲಿ ಕೆಲವು ಅತ್ಯಂತ ಜರೂರಾಗಿ ಆಗಬೇಕಾಗಿದೆ. ಬೇರೆ ಕಾಮಗಾರಿಗಳನ್ನು ಯಾವ ರೀತಿ ಬಜೆಟ್‌ನಲ್ಲಿ ಮೌಖಿಕವಾಗಿ ಇಲ್ಲದಿದ್ದರೂ ಸಹ ಆದೇಶವನ್ನು ಕೊಟ್ಟು ಮಾಡಿಸುತ್ತೀರೋ ಆ ರೀತಿ ಇದನ್ನು ಮಾಡಿಸಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು : ಅವರು ಒಪ್ಪಿಕೊಂಡಿದ್ದಾರಲ್ಲ.

ಐಹೊಳೆಯಲ್ಲಿ ಕ.ರಾ.ಪ್ರ.ಅ.ನಿ.ದ ಹೋಟೆಲ್ ನಿರ್ಮಾಣದ ಬಗ್ಗೆ.

3036-ಶ್ರೀ ಪೆಂಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಐಹೊಳೆಯಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಊಟ ಮತ್ತು ವಸತಿ ಸೌಕರ್ಯ ಉಳ್ಳ ಹೋಟೆಲ್ ಇದೆಯೇ?

ಆ) ಇಲ್ಲದಿದ್ದಲ್ಲಿ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಸುಸಜ್ಜಿತವಾದ ಅತ್ಯಾಧುನಿಕ ಹೋಟೆಲ್ ಕಟ್ಟಲು ಪ್ರಸ್ತಾವನೆ ಇದೆಯೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು): ಅ) ಇಲ್ಲ. ಆದಗ್ ಪ್ರವಾಸೋದ್ಯಮ ಇಲಾಖೆಯ ಮೇಲ್ವಿಚಾರಣೆಯಲ್ಲಿ 10 ಕೊಠಡಿಗಳು ಮತ್ತು ಊಟದ ಕೋಣೆ ಇರುವ ವಸತಿಗೃಹವನ್ನು ನಡೆಸಲಾಗುತ್ತಿದೆ.

ಆ) ಐಹೊಳೆಯಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಯಾವುದೇ ರೀತಿಯ ಹೋಟೆಲ್ ಕಟ್ಟುವ ಯೋಜನೆ ಇರುವುದಿಲ್ಲ.